ಈ) ಮೇಲ್ಕಂಡ ಮನೆಗಳಿಗೆ ಕೊಡಬೇಕಾದ ಪೂರ್ತಾ ಹಣವನ್ನು ಸರ್ಕಾರ ಈಗಾಗಲೇ ಬಿಡುಗಡೆ ಮಾಡಿದೆ. ಈ ಹಣಕಾಸು ವರ್ಷದೊಳಗೆ ಮಂಜೂರಾದ ಎಲ್ಲಾ ಮನೆಗಳನ್ನು ಪೂರ್ಣಗೊಳಿಸಬೇಕೆಂದು ಆದೇಶ ನೀಡಲಾಗಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

೩೪೪ (೧೦೯೭) ಶ್ರೀ ಮಲ್ಲಿಕಾರ್ಜುನ ಬಸಪ್ಪ ದಿವಟರ್ (ಕೊಪ್ಪಳ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ೧೯೭೯ ರಿಂದ ೧೯೮೩ರವರೆಗೆ ಉಂಟಾದ ಒಟ್ಟು ನಷ್ಟದ ಮೊತ್ತವೆಷ್ಟು ?

ಆ) ಈ ನಷ್ಟಕ್ಕೆ ಕಾರಣಗಳೇನು ?

ಶ್ರೀ ಎಂ. ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).—

ಅ) ೧೯೭೯–೮೦ ರಿಂದ ೧೯೮೨–೮೩ರವರೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒಟ್ಟು ೫,೭೩೪.೫೯ ಲಕ್ಷ ರೂ.ಗಳ ನಷ್ಟವನ್ನು ಅನುಭವಿಸಿದೆ.

ಆ) ಈ ಕೆಳಕಂಡ ಕಾರಣಗಳು:—

೧) ನೌಕರರಿಗೆ ಪರಿಷ್ಕೃತ ವೇತನ, ತುಟ್ಟಿಭತ್ಯ ನೀಡಿಕೆ.

೨) ಟೈರುಗಳು, ಟ್ಯೂಬುಗಳ, ಬಿಡಿ ಭಾಗಗಳ ಏರಿಕೆ.

೩) ವಾಹನ ತೆರಿಗೆ ಮತ್ತು ಸರ್‌ಚಾರ್ಜನ ಏರಿಕೆ.

೪) ರೈತರ, ಕಾರ್ಮಿಕರ ಮತ್ತು ವಿದ್ಯಾರ್ಥಿಗಳ ಆಂದೋಳನ ಪರಿಣಾಮವಾಗಿ ಬಸ್ಸುಗಳಿಗೆ ಆದ ಜಕಂ.

೫) ಪ್ರಯಾಣಿಕರಿಗೆ ಪ್ರಯಾಣದರದಲ್ಲಿ ಕೊಟ್ಟ ರಿಯಾಯಿತಿಗಳು

ರಾಜ್ಯದ ಪ್ರವಾಸೋದ್ಯಮ ಇಲಾಖೆಯ ಅಧೀನದಲ್ಲಿರುವ ಹೋಟೆಲ್‌ಗಳು

(೧೦೪೦) ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).—ಮಾನ್ಯ ವಾರ್ತಾ, ಪ್ರಚಾರ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ರಾಜ್ಯದ ಪ್ರವಾಸೋದ್ಯಮ ಇಲಾಖೆಯಿಂದ ನಡೆಯುವ ಹೊಟಲುಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ಮಾಹಿತಿಯನ್ನೊದಗಿಸುವುದು)

ಆ) ಸದರಿ ಹೋಟೇಲುಗಳು ಯಾರ ವಶೀಕರಣದಲ್ಲಿ ಸೇರುತ್ತವೆ ?

ಇ) ಇವುಗಳಿಂದ ಬರುವ ವಾರ್ಷಿಕ ಲಾಭ ಎಷ್ಟು ? (೧೯೮೦–೮೧, ೧೯೮೧–೮೨, ೧೯೮೨–೮೩ ಮತ್ತು ೧೯೮೩–೮೪ರ ವಿವರಗಳನ್ನೊದಗಿಸುವುದು)

ಶ್ರೀ ಎಂ. ರಘುಪತಿ (ವಾರ್ತಾ, ಪ್ರಚಾರ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ೧೨ ಹೋಟೇಲುಗಳು ಮತ್ತು ೨ ಉಪಹಾರ ಗೃಹಗಳು ನಡೆಯುತ್ತಿವೆ (ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ಲಗತ್ತಿಸಿದೆ)

ಆ) ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವಶೀಕರಣದಲ್ಲಿ ಸೇರುತ್ತವೆ.

೫) ವಾರ್ಷಿಕ ಲಾಭ ಹಾಗೂ ಹಾನಿಗಳ ವಿವರ ಕೆಳಗಿನಂತೆ ಇವೆ.

ಕ್ರ.ಸಂ.	ವರ್ಷ	ಲಾಭ (ಲಕ್ಷ ರೂಗಳಲ್ಲಿ)	ಷರಾ
೧	೧೯೮೦-೮೧	೨.೮೨	
೨	೧೯೮೧-೮೨	೨.೩೫	(ಪ್ರಾವಿಷನಲ್)
೩	೧೯೮೨-೮೩	೪.೭೪	ನಷ್ಟ
		ಲೆಕ್ಕದ ವರ್ಷ ಮುಗಿದಿಲ್ಲ. ಅನುಬಂಧ	(ಅಂದಾಜು)

ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಡೆಸುವ ಹೊಟೇಲುಗಳು ಈ ರೀತಿ ಇವೆ.

ಕ್ರ. ಸಂ.	ಹೋಟೆಲು ಹೆಸರು	ಸ್ಥಳ	ಜಿಲ್ಲೆ
೧.	ಮಯೂರ ಕಬ್ಬನ್ ಪಾರ್ಕ್	ಬೆಂಗಳೂರು	ಬೆಂಗಳೂರು
೨.	ಮಯೂರ ವಸಶ್ರೀ	ಬನ್ನೇರುಘಟ್ಟ	ಬೆಂಗಳೂರು
೩.	ಮಯೂರ ಪೈನ್‌ಟಾಪ್	ನಂದಿಬೆಟ್ಟ	ಕೋಲಾರ
೪.	ಮಯೂರ ಹೊಯ್ಸಳ	ಮೈಸೂರು	ಮೈಸೂರು
೫.	ಮಯೂರ ರಿವರ್‌ಸೈಡ್‌ಕಾಟೇಜಿ	ಶ್ರೀರಂಗಪಟ್ಟಣ	ಮಂಡ್ಯ
೬.	ಮಯೂರ ಕಾವೇರಿ	ಕೃಷ್ಣರಾಜಸಾಗರ	ಮಂಡ್ಯ
೭.	ಮಯೂರ ನೇತ್ರಾವತಿ	ಮಂಗಳೂರು	ಮಂಗಳೂರು
೮.	ಮಯೂರ ವ್ಯಾಲಿವ್ಯೂ	ಮಡಿಕೇರಿ	ಕೊಡಗು
೯.	ಮಯೂರ ಸುದರ್ಶನ	ಊಟಿ	ಊಟಿ ತಮಿಳುನಾಡು
೧೦.	ಮಯೂರ ವಿಜಯನಗರ	ತುಂಗಭದ್ರ ಡ್ಯಾಂ	ಬಳ್ಳಾರಿ
೧೧.	ಮಯೂರ ಚಾಲುಕ್ಯ	ಬಾದಾಮಿ	ವಿಜಾಪುರ
೧೨.	ಮಯೂರ ಆದಿಲ್‌ಷಾಹಿ	ವಿಜಾಪುರ	ವಿಜಾಪುರ
೧೩.	ಮಯೂರ ಬಹಮನಿ	ಗುಲ್ಬರ್ಗ	ಗುಲ್ಬರ್ಗ
೧೪.	ಮಯೂರ ಬರೀದ್‌ಷಾಹಿ	ಬೀದರ್	ಬೀದರ್

Transport facilities from Bidar to Puna

347 (1068) SRI NARAYANA RAO MANAHALLI (Bidar).—Will the Minister of State for Transport be pleased to state that :—

a) Whether there is any proposal before the Government to start bus service from Bidar to Poona Bidar to Sholapur, Bidar to Ankola, Bidar to Nizamabad, Bidar to Hyderabad and Bidar to Zahirabad *viz.*, Manahalli ?

b) If so, when it will be started or introduced ?

c) Whether the Government has received any such requisition from the Legislator of the area ?